CIN:U40109KA2004SGCO35177 Web site: www.cescmysore.org

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೋಂದಾಯಿತ ಕಛೇರಿ ವಿಳಾಸ: ನಿಗಮ ಕಾರ್ಯಾಲಯ, ನಂ: 29, ವಿಜಯನಗರ 2ನೇ ಹಂತ, ಹಿನ್‌ಕಲ್, ಮೈಸೂರು-570 017

ದೂರವಾಣಿ ಸಂಖ್ಯೆ: 0821-2560803
ಮೊಬೈಲ್: 9448994743.
E-mail: aeekmp1@cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸ.ನಿ.ನಿ., ಕುವೆಂಪುನಗರ ಉಪವಿಭಾಗ,
ಗಗನಚುಂಬಿ ಜೋಡಿರಸ್ತೆ, ಮೈಸೂರು- 570 023.

---

## ಸಭಾ ನಡಾವಳಿ

ದಿನಾಂಕ 21-11-2017 ರಂದು ಮಧ್ಯಾಹ್ನ 3.00 ಗಂಟೆಗೆ ಅಧೀಕ್ಷಕ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ., ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಕುವೆಂಪುನಗರ ಉಪವಿಭಾಗದ ಜನಸಂಪರ್ಕ ಸಭೆಯ ನಡಾವಳಿ.

ಈ ಕೆಳಕಂಡ ಅಧಿಕಾರಿಗಳು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದರು.

1. ಮಮತ ಎಂ ಸಂದೀಪ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ, ಸೆಸ್ಕ್, ಮೈಸೂರು.
2. ಬಿ.ಬಿ. ಶಿವಣ್ಣ ಸಹಾಯಕ ಇಂಜಿನಿಯರ್(ವಿ), ಸರಸ್ವತಿಪುರಂ ಶಾಖೆ,
3. ಆರ್. ಮದನ್, ಸಹಾಯಕ ಇಂಜಿನಿಯರ್(ವಿ), ಅರವಿಂದ ಶಾಖೆ,
4. ಮುರಳಿ, ಸಹಾಯಕ ಇಂಜಿನಿಯರ್(ವಿ), ನಿವೇದಿತ ಶಾಖೆ,
5. ಮಧುಸೂದನ್ ಸಹಾಯಕ ಲೆಕ್ಕಾಧಿಕಾರಿ, ಕಂದಾಯ ಶಾಖೆ.

ಮೊದಲಿಗೆ ಅಧೀಕ್ಷಕ ಇಂಜಿನಿಯರ್(ವಿ .ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುವ ಮೂಲಕ ಕೆ.ಇ.ಆರ್.ಸಿ. ನಿಯಮಾವಳಿಯ ಅನ್ವಯ ಪ್ರತಿ 3 ತಿಂಗಳಿಗೊಮ್ಮೆ ಎಲ್ಲಾ ಉಪವಿಭಾಗಗಳಲ್ಲಿ ಜನಸಂಪರ್ಕ ಸಭೆಯನ್ನು ನಡೆಸುತ್ತಿರುವುದಾಗಿ ತಿಳಿಸಿ ಈ ಹಿಂದೆ ದಿನಾಂಕ: 21-08-2017 ರಂದು ನಡೆಸಿದ ಜನಸಂಪರ್ಕ ಸಭೆಯಲ್ಲಿ ಗ್ರಾಹಕರಿಂದ ಒಟ್ಟು 2 ದೂರುಗಳು ಬಂದಿದ್ದು, ಆ 2 ದೂರುಗಳನ್ನು ಪರಿಹರಿಸಿರುವ ಬಗ್ಗೆ ಪರಿಶೀಲಿಸಿ ಪರಿಹರಿಸಿರುವುದಾಗಿ ತಿಳಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರಲ್ಲಿ ಈ ಕೆಳಕಂಡ ಗ್ರಾಹಕರು ತಮ್ಮ ಸಲಹೆಗಳು ಹಾಗೂ ಅವರ ಸಮಸ್ಯೆಗಳ ಬಗ್ಗೆ ತಿಳಿಸಿರುತ್ತಾರೆ.

1. **ಶ್ರೀ ಚಿನ್ನರಾಜು, ನಂ: 413, ರೈಲ್ವೆ ಲೇಔಟ್, ರಮಾಬಾಯಿನಗರ, ಮೈಸೂರು.**
   ಇವರು ತಮ್ಮ ಮನೆಯ ಮುಂದೆ ಇರುವ ವಿದ್ಯುತ್ ಕಂಬವು ಮನೆಗೆ ಹತ್ತಿರವಿರುವುದರಿಂದ ಓಡಾಡಲು ತೊಂದರೆಯಾಗಿದ್ದು, ಸ್ಥಳಾಂತರಿಸಲು ಕೋರಿದರು.

**ಅಧೀಕ್ಷಕ ಇಂಜಿನಿಯರ್(ವಿ):** ಶ್ರೀ ಚಿನ್ನರಾಜು ರವರಿಗೆ ಅವರ ಮನೆಯ ಮುಂದಿನ ವಿದ್ಯುತ್ ಕಂಬವನ್ನು ಬೇರೆ ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಉಪವಿಭಾಗಾಧಿಕಾರಿಗಳಿಗೆ ಈ ಕುರಿತು ಮನವಿಯನ್ನು ಸಲ್ಲಿಸಿ, ಇದಕ್ಕೆ ತಗಲುವ ವೆಚ್ಚವನ್ನು ಇಲಾಖೆಗೆ ಭರಿಸಲು ಸಿದ್ಧರಾಗಿರುವುದಾಗಿ ತಿಳಿಸಿದರು. ಸಂಬಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಸ್ಥಳಾಂತರಿಸಿಕೊಡುವುದಾಗಿ ಸೂಚಿಸಿ, ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸದರಿ ಗ್ರಾಹಕರು ಮನವಿಯನ್ನು ಸಲ್ಲಿಸಿದ ನಂತರ ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು.

2. **ಶ್ರೀ ನಾಗಭೂಷಣ ಆರಾಧ್ಯ,798, 5ನೇ ಮೇನ್, 5ನೇ ಕ್ರಾಸ್, ರಮಾಬಾಯಿನಗರ, ಮೈಸೂರು.**
   ಇವರು ಶ್ರೀ ರಾಜಣ್ಣ, ನಂ: 174/2ಬಿ, 6ನೇ ಅಡ್ಡರಸ್ತೆ, ಮಹದೇವಪುರ, ಮೈಸೂರು ಆರ್.ಆರ್.ಸಂಖ್ಯೆ: ಕೆ.ಎ.ಎಲ್-41132 ಸ್ಥಾವರಕ್ಕೆ ವಿದ್ಯುತ್ ಖಾತೆ ಬದಲಾವಣೆಗಾಗಿ ಅರ್ಜಿ ನೀಡಿದ್ದು, ವಿಳಂಬವಾಗಿರುವುದಕ್ಕೆ ಕಾರಣ ಹಾಗೂ ಪರಿಹಾರ ನೀಡಲು ಕೋರಿರುತ್ತಾರೆ ಹಾಗೂ ಉಪವಿಭಾಗಾಧಿಕಾರಿ/ಶಾಖಾಧಿಕಾರಿಗಳನ್ನು ಉಪವಿಭಾಗದಲ್ಲಿ ಭೇಟಿಯಾಗುವ ಸಮಯದ ಬಗ್ಗೆ ತಿಳಿಸಿದರು.

**ಅಧೀಕ್ಷಕ ಇಂಜಿನಿಯರ್(ವಿ):** ಆರ್.ಆರ್.ಸಂಖ್ಯೆ: ಕೆ.ಎ.ಎಲ್-41132 ಸ್ಥಾವರಕ್ಕೆ ವಿದ್ಯುತ್ ಖಾತೆ ಬದಲಾವಣೆಗಾಗಿ ಕೆ.ಇ.ಆರ್.ಸಿ. ನಿಯಮಾವಳಿ ಅನ್ವಯ ದಾಖಲಾತಿಗಳನ್ನು ಸಲ್ಲಿಸದ ಕಾರಣ ಸದರಿ ಗ್ರಾಹಕರಿಗೆ ಪತ್ರವನ್ನು ಬರೆಯಲಾಗಿದೆ. ಸೂಕ್ತ ದಾಖಲಾತಿಗಳನ್ನು ಸಲ್ಲಿಸದ ಕಾರಣ ವಿಳಂಬವಾಗಿರುತ್ತದೆ ಎಂದು ಉಪವಿಭಾಗಾಧಿಕಾರಿಗಳು ತಿಳಿಸಿದ್ದರಿಂದ, ಗ್ರಾಹಕರ ಪರವಾಗಿ ಬಂದಿರುವ ಶ್ರೀ ನಾಗಭೂಷಣ ಆರಾಧ್ಯ ರವರಿಗೆ ಪತ್ರವನ್ನು ನೀಡಲು ತಿಳಿಸಿದರು ಹಾಗೂ ವಿಳಂಬಕ್ಕೆ ಪರಿಹಾರ ನೀಡುವ ಬಗ್ಗೆ ಸಿ.ಜಿ.ಆರ್.ಎಫ್ ನಲ್ಲಿ ನೀಡುವ ತೀರ್ಪಿನಂತೆ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು. ಉಪವಿಭಾಗಾಧಿಕಾರಿಗಳು ಕಾರ್ಯನಿರ್ವಹಣಾಧಿಕಾರಿ ( Executive Officer) ಗಳಾಗಿರುವುದರಿಂದ,

ಹಾಗೂ ಇವರ ಸೇವೆಯು ತುರ್ತು ಅವಶ್ಯ ಸೇವೆಯ ಸ್ವರೂಪದ್ದಾಗಿರುವುದರಿಂದ ನಿರ್ದಿಷ್ಟ ಸಮಯವನ್ನು ಹೇಳುವುದು ಕಷ್ಟಕರವಾಗುವುದರಿಂದ, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ದೂರವಾಣಿ ಸಂಖ್ಯೆ ಲಭ್ಯವಿರುವುದರಿಂದ ದೂರವಾಣಿ ಮುಖಾಂತರವೂ ಕೂಡ ಸಂಪರ್ಕಿಸುವಂತೆ ಸೂಚಿಸಿದರು ಹಾಗೂ ಉಪವಿಭಾಗಾಧಿಕಾರಿ/ಶಾಖಾಧಿಕಾರಿಗಳು ಕಾರ್ಯಸ್ಥಾನದಿಂದ ಹೊರಗೆ ಹೋಗಬೇಕಾದಲ್ಲಿ ಸಂಬಂಧಪಟ್ಟವರಿಗೆ ಮಾಹಿತಿ ನೀಡಿ ತೆರಳುವಂತೆ ಸೂಚಿಸಿದರು.

3. **ಶ್ರೀ ಅಶ್ವಥನಾರಾಯಣ, ವಿದ್ಯುತ್ ಗುತ್ತಿಗೆದಾರರು.**

ವಿದ್ಯುತ್ ಖಾತಾ ಬದಲಾವಣೆ, ಜಕಾತಿ ಬದಲಾವಣೆ, ಸೋಲಾರ್ ರಿಯಾಯಿತಿ, ಶಾಶ್ವತ ವಿದ್ಯುತ್ ನಿಲುಗಡೆ ಇವುಗಳಿಗಾಗಿಗ್ರಾಹಕರು ಅರ್ಜಿ ನೀಡಬೇಕಾದಲ್ಲಿ ಅರ್ಜಿದಾರರು ಪಾಲಿಸಬೇಕಾದ ನಿಯಮಾವಳಿಗಳ ವಿವರವನ್ನು ಸೂಚನಾ ಫಲಕದಲ್ಲಿ ಹಾಕಲು ಕೋರಿದರು.

**ಅಧೀಕ್ಷಕ ಇಂಜಿನಿಯರ್(ವಿ):** ಸಂಬಂಧಪಟ್ಟ ಮಾಹಿತಿಗಳ ಬಗ್ಗೆ ಸೂಚನಾ ಫಲಕದಲ್ಲಿ ವಿವರಣಾ ಪಟ್ಟಿಯನ್ನು ಹಾಕಿಸುವಂತೆ ಸೂಚಿಸಿದರು.

4. **ಶ್ರೀ ಕುಮಾರ್, ವಿದ್ಯುತ್ ಗುತ್ತಿಗೆದಾರರು.**

ವಿದ್ಯುತ್ ಖಾತಾ ಬದಲಾವಣೆ ಮಾಡಿದ ನಂತರ ನೀಡುವ ಅಧಿಕೃತ ಜ್ಞಾಪನಾ ಪತ್ರದಲ್ಲಿ ಹಾಗೂ ಬಿಲ್ ಪಾವತಿಸಿರುವ ರಶೀತಿಯಲ್ಲಿ ನಮೂದಿಸಿರುವ ಹೆಸರುಗಳಲ್ಲಿ ವ್ಯತ್ಯಾಸವಿದ್ದು ತಪ್ಪಾಗಿ ನಮೂದಾಗಿರುತ್ತದೆ (ಸ್ಪೆಲ್ಲಿಂಗ್ ತಪ್ಪುಗಳು)

**ಅಧೀಕ್ಷಕ ಇಂಜಿನಿಯರ್(ವಿ):** ಈ ಬಗ್ಗೆ ಸಂಬಂಧಪಟ್ಟ ಕಂದಾಯ ಶಾಖೆಯಲ್ಲಿನ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಹೆಸರುಗಳನ್ನು ಸರಿಯಾಗಿ ತಪ್ಪಿಲ್ಲದಂತೆ ನಮೂದಿಸುವಂತೆ ತಿಳಿಸುವಂತೆ ಸಹಾಯಕ ಲೆಕ್ಕಾಧಿಕಾರಿಯವರಿಗೆ ಸೂಚಿಸಿದರು.

5. **ಶ್ರೀ ಎಸ್. ಚೆನ್ನಪ್ಪ, ನಂ: 593, 4ನೇ ಕ್ರಾಸ್, 1ನೇ ಮೇನ್, ರಾಮಕೃಷ್ಣನಗರ, ಮೈಸೂರು.**

ಆರ್.ಆರ್.ಸಂಖ್ಯೆ: ಎ32391 ಸ್ಥಾವರದ ವಿದ್ಯುತ್ ಬಿಲ್ ಹೆಚ್ಚಾಗಿ ಬರುತ್ತಿರುವುದರಿಂದ, ಸದರಿ ಮಾಪಕವನ್ನು ಪರಿಶೀಲಿಸಲು ಕೋರಿರುತ್ತಾರೆ.

**ಅಧೀಕ್ಷಕ ಇಂಜಿನಿಯರ್(ವಿ):** ಆರ್.ಆರ್.ಸಂಖ್ಯೆ: ಎ32391 ಸ್ಥಾವರವು ನಿವೇದಿತ ಶಾಖಾ ವ್ಯಾಪ್ತಿಗೆ ಬರುವುದರಿಂದ, ಶಾಖಾಧಿಕಾರಿಗಳಿಗೆ ಮಾಪಕವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಕುವೆಂಪುನಗರ ಉಪವಿಭಾಗದ ವ್ಯಾಪ್ತಿಯಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆ ಇದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ ರವರಿಗೆ ದೂರವಾಣಿ ಮೂಲಕ ಅಥವಾ ಕಛೇರಿಗೆ ಬಂದು ತಿಳಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Mamatha. H

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕುವೆಂಪುನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು

ಸಂಖ್ಯೆ: ಸಕಾನಿಇಂ(ವಿ), ಸ.ಇಂ(ತಾಂ)/ಕುನ/ಉವಿ/ 2161-67 ದಿನಾಂಕ: 27/11/17

ಪ್ರತಿಯನ್ನು,

1. ಅಧೀಕ್ಷಕ ಇಂಜಿನಿಯರ್(ವಿ), ಕಾ.ಮತ್ತು ಪಾ.ವೃತ್ತ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲ ವಿಭಾಗ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
3. ಶಾಖಾಧಿಕಾರಿಗಳು, ಸರಸ್ವತಿಪುರಂ ಶಾಖೆ, ಅರವಿಂದ ಶಾಖೆ, ನಿವೇದಿತ ಶಾಖೆ, ಕಂದಾಯ ಶಾಖೆ, ತಾಂತ್ರಿಕ ಶಾಖೆ, ಕುವೆಂಪುನಗರ ಉಪವಿಭಾಗ, ಚಾವಿಸನಿನಿ.,ಮೈಸೂರು ರವರಿಗೆ.

ಪ್ರ.ಕ.